**All India Radio: Bangalore**
**National Bulletin In Kannada**
**28.10.2025 1.10 p.m.**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು :

1. ಹವಾಮಾನ ಬದಲಾವಣೆ ಎದುರಿಸಲು ತ್ವರಿತ ಮತ್ತು ದೃಢಕ್ರಮಗಳು ಅಗತ್ಯ - ರಾಷ್ಟ್ರಪತಿ ದ್ರೌಪದಿ ಮುರ್ಮು
2. ಶಾಂತಿ, ಸ್ಥಿರತೆಗೆ ಬದ್ಧತೆ ಪುನರುಚ್ಚರಿಸಿದ ಕೌಲಾಲಂಪುರ್ ಘೋಷಣೆ; ಪೂರ್ವ-ಏಷ್ಯಾ ಶೃಂಗಸಭೆಯಲ್ಲಿ ಅಂಗೀಕಾರ
3. ಮೊಂಥಾ ಚಂಡಮಾರುತ; ಆಂಧ್ರಪ್ರದೇಶ, ಕರಾವಳಿಯಾದ್ಯಂತ ಬಲವಾದ ಗಾಳಿಯೊಂದಿಗೆ ಭಾರೀ ಮಳೆ
4. ಸೀಷೆಲ್ಸ್ ಪ್ರವಾಸ ಸಂಪನ್ನಗೊಳಿಸಿ ಭಾರತಕ್ಕೆ ಮರಳಿದ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್
5. ಕಳೆದ ತಿಂಗಳಲ್ಲಿ ದಾಖಲೆಯ ೧.೮ ಶತಕೋಟಿ ಡಾಲರ್ ತಲುಪಿದ ಭಾರತದ ಸ್ಮಾರ್ಟ್‌ಫೋನ್ ರಫ್ತು

<><><><>

ಇಡೀ ಜಗತ್ತಿನ ಮೇಲೆ ಪರಿಣಾಮ ಬೀರುತ್ತಿರುವ ಹವಾಮಾನ ಬದಲಾವಣೆಯನ್ನು ಎದುರಿಸಲು ದೃಢವಾದ ಕ್ರಮವಹಿಸುವ ಅಗತ್ಯವಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ನವದೆಹಲಿಯ ಭಾರತ್ ಮಂಟಪದಲ್ಲಿಂದು ಅಂತಾರಾಷ್ಟ್ರೀಯ ಸೌರ ಒಕ್ಕೂಟ - ಐಎಸ್‌ಎ ಸಭೆಯ ೮ನೇ ಅಧಿವೇಶನದಲ್ಲಿ ಮುಖ್ಯ ಭಾಷಣ ಮಾಡಿದ ರಾಷ್ಟ್ರಪತಿ ಜಾಗತಿಕ ಹವಾಮಾನ ಬದಲಾವಣೆ ವಿರುದ್ಧ ಕ್ರಮವಹಿಸಲು ಭಾರತ ಬದ್ಧವಾಗಿದೆ. ಭಾರತ ಹಾಗೂ ಜಗತೀನಾದ್ಯಂತದ ನಾಗರಿಕತೆಗಳು ಸೂರ್ಯನನ್ನು ಜೀವ ಮತ್ತು ಶಕ್ತಿಯ ಮೂಲವೆಂದು ಪರಿಗಣಿಸುತ್ತವೆ ಎಂದರು.

ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಹ್ಲಾದ್ ಜೋಶಿ , ಐಎಸ್‌ಎ ಒಕ್ಕೂಟದ ಮಹಾ ನಿರ್ದೇಶಕ ಆಶಿಶ್ ಖನ್ನಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ನಾಲ್ಕು ದಿನಗಳ ಈ ಜಾಗತಿಕ ಕಾರ್ಯಕ್ರಮದಲ್ಲಿ ೧೨೪ ರಾಷ್ಟ್ರಗಳು ಮತ್ತು ಜಗತ್ತಿನಾದ್ಯಂತದ ೪೦ಕ್ಕೂ ಹೆಚ್ಚು ಸಚಿವರು ಭಾಗವಹಿಸುತ್ತಿದ್ದಾರೆ. ಈ ಕಾರ್ಯಕ್ರಮ ಸಹಕಾರವನ್ನು ಬಲಪಡಿಸಲು ಹಾಗೂ ಉಜ್ವಲ ಮತ್ತು ಸುಸ್ಥಿರ ಭವಿಷ್ಯಕ್ಕಾಗಿ ಸೌರಶಕ್ತಿ ಅಳವಡಿಕೆಯನ್ನು ವೇಗಗೊಳಿಸಲು ಜಾಗತಿಕ ಸಮುದಾಯವನ್ನು ಒಟ್ಟುಗೂಡಿಸಿದೆ.

<><><><>

ಶಾಂತಿ ಮತ್ತು ಸ್ಥಿರತೆಗೆ ಬದ್ಧತೆಯನ್ನು ಪುನರುಚ್ಚರಿಸುವ ಕೌಲಾಲಂಪುರ್ ಘೋಷಣೆಯನ್ನು ೨೦ನೇ ಪೂರ್ವ ಏಷ್ಯಾ ಶೃಂಗಸಭೆ ಅಂಗೀಕರಿಸಿದೆ. ಕೌಲಾಲಂಪುರ್‌ನಲ್ಲಿ ನಡೆದ ಶೃಂಗಸಭೆಯ ಸಂದರ್ಭದಲ್ಲಿ ಅಂಗೀಕರಿಸಲಾದ ಘೋಷಣೆ. ಕಾರ್ಯತಂತ್ರದ ವಿಶ್ವಾಸವನ್ನು ಉತ್ತೇಜಿಸಲು ಹಾಗೂ ಪ್ರಾದೇಶಿಕ ಮತ್ತು ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಪಾರದರ್ಶಕ ಮತ್ತು ಜವಾಬ್ದಾರಿಯುತ ನಡವಳಿಕೆಯನ್ನು ಖಚಿತಪಡಿಸಿಕೊಳ್ಳಲು ಭಾಗವಹಿಸುವ ಇತರ ದೇಶಗಳೊಂದಿಗೆ ನಿಕಟ ಪಾಲುದಾರಿಕೆಗೆ ಈ ಘೋಷಣೆ ಕರೆ ನೀಡಿದೆ. ಪ್ರಾದೇಶಿಕ ಅಭಿವೃದ್ಧಿಗೆ ಸಹಕಾರ, ಭದ್ರತಾ ನೀತಿಗಳು, ವಿಪತ್ತು ನಿರ್ವಹಣೆ ಮತ್ತು ಉದಯೋನ್ಮುಖ ಪ್ರಾದೇಶಿಕ ವ್ಯವಸ್ಥೆಯ ಕುರಿತು ಮಾಹಿತಿ ವಿನಿಮಯದ ಮಹತ್ವವನ್ನು ಇದು ಒತ್ತಿ ಹೇಳಿದೆ.

<><><><>

ಬಂಗಾಳಕೊಲ್ಲಿಯಲ್ಲಿ 'ಮೊಂಥಾ' ಚಂಡಮಾರುತ ಬಿರುಸುಗೊಳ್ಳುತ್ತಿದೆ. ಗಾಳಿ ೯೦ ರಿಂದ ೧೦೦ ಕಿಲೋಮೀಟರ್ ವೇಗದಲ್ಲಿ ಗಾಳಿ ಬೀಸುತ್ತಿದ್ದು,, ಆಂಧ್ರಪ್ರದೇಶ ಕರಾವಳಿಯಾದ್ಯಂತ ಭಾರೀ ಮಳೆ ಸುರಿಯುತ್ತಿದೆ. ಶ್ರೀಕಾಕೂಲಂ, ವಿಶಾಖಪಟ್ಟಣಂ, ಅನಕಪಲ್ಲಿ, ಪೂರ್ವ ಗೋಧಾವರಿ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಈಗಾಗಲೇ ಭಾರೀ ಮಳೆಯ

ಜೊತೆಗೆ ತೀವ್ರ ಗಾಳಿ ಬೀಸುತ್ತಿದೆ.  ಹಲವು ಜಿಲ್ಲೆಗಳಿಗೆ ಆರೆಂಜ್ ಹಾಗೂ ಯೆಲ್ಲೊ ಅಲರ್ಟ್ ಘೋಷಿಸಲಾಗಿದೆ. ಆಂಧ್ರಪ್ರದೇಶ ಸರ್ಕಾರ ದಿನದ ೨೪ಗಂಟೆ ಕಾರ್ಯ ನಿರ್ವಹಿಸುವ ನೈಜ ಸಮಯದ ಆಡಳಿತಾತ್ಮಕ ವಾರ್ ರೂಮ್ ಅನ್ನು ಸ್ಥಾಪಿಸಿದ್ದು, ಕಟ್ಟೆಚ್ಚರವಹಿಸಿದೆ. ಎಲ್ಲಾ ಆಸ್ಪತ್ರೆಗಳನ್ನು ಹೈ ಅಲರ್ಟ್‌ನಲ್ಲಿಡಲಾಗಿದ್ದು, ಗರ್ಭಿಣಿ ಮಹಿಳೆಯರು ಮತ್ತು ಹಾಲುಣಿಸುವ ತಾಯಂದಿರ ಕುರಿತು ವಿಶೇಷ ಗಮನ ಹರಿಸಲಾಗಿದೆ. ಸುಮಾರು ೩೪೪ ಶಾಲೆಗಳನ್ನು ಚಂಡಮಾರುತ ಪರಿಹಾರ ಕೇಂದ್ರಗಳಾಗಿಸಲಾಗಿದೆ. ಎಲ್ಲಾ ರೀತಿಯ ಸಮುದ್ರ ಚಟುವಟಿಕೆಗಳಿಗೆ ನಿರ್ಬಂಧ ವಿಧಿಸಲಾಗಿದೆ. ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಪರಿಸ್ಥಿತಿ ಕುರಿತು ಸ್ವತಃ ಮೇಲ್ವಿಚಾರಣೆ ನಡೆಸುತ್ತಿದ್ದಾರೆ. ಈಗಾಗಲೇ ಪ್ರಧಾನಿ ನರೇಂದ್ರ ಮೋದಿ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿದ್ದು, ಪರಿಹಾರ ಮತ್ತು ಪುನರ್ ವಸತಿಗಾಗಿ ಸಂಪೂರ್ಣ ಬೆಂಬಲದ ಭರವಸೆ ನೀಡಿದ್ದಾರೆ.  ದಕ್ಷಿಣ ಮಧ್ಯ ರೈಲ್ವೆ, ಪೂರ್ವ ಕರಾವಳಿ ರೈಲ್ವೆ ಮತ್ತು ಏರ್ ಇಂಡಿಯಾ ಎಕ್ಸ್‌ಪ್ರೆಸ್ ಇಂದು ತಮ್ಮ ಹಲವು ಸೇವೆಗಳನ್ನು ರದ್ದುಗೊಳಿಸಿವೆ. ನಾಗರಿಕರು ಮನೆಯೊಳಗೆ ಇರಲು ಮತ್ತು ಸುರಕ್ಷತಾ ಸಲಹೆಗಳನ್ನು ಅನುಸರಿಸಲು ಅಧಿಕಾರಿಗಳು ಸಲಹೆ ನೀಡಿದ್ದಾರೆ. ಒಡಿಶಾದಲ್ಲಿ, ಮುಂಬರುವ ಚಂಡಮಾರುತದಿಂದ ಉಂಟಾಗುವ ಯಾವುದೇ ಸಂಭಾವ್ಯ ಪರಿಣಾಮವನ್ನು ನಿಭಾಯಿಸಲು ರಾಜ್ಯ ಸರ್ಕಾರವು ಸನ್ನದ್ಧತಾ ಕ್ರಮಗಳನ್ನು ಹೆಚ್ಚಿಸಿದೆ. ಹವಾಮಾನ ಇಲಾಖೆಯು ರಾಜ್ಯದ ಎಂಟು ದಕ್ಷಿಣ ಜಿಲ್ಲೆಗಳಿಗೆ ರೆಡ್ ಅಲರ್ಟ್ ನೀಡಿದೆ. ಈ ಜಿಲ್ಲೆಗಳಲ್ಲಿನ ಶಾಲೆಗಳು ಮತ್ತು ಅಂಗನವಾಡಿ ಕೇಂದ್ರಗಳನ್ನು ಇಂದಿನಿಂದ ಮೂರು ದಿನಗಳವರೆಗೆ ಮುಚ್ಚಲಾಗಿದೆ. ಮೊಂಥಾ ಚಂಡಮಾರುತದ ಹಿನ್ನೆಲೆಯಲ್ಲಿ ರೈಲು ಸಂಖ್ಯೆ ೧೭೨೧೦ ಕಾಕಿನಾಡ ಟೌನ್ - ಎಸ್‌ಎಂವಿಟಿ ಬೆಂಗಳೂರು ಎಕ್ಸ್‌ಪ್ರೆಸ್ ಅನ್ನು ರದ್ದುಗೊಳಿಸಲಾಗಿದೆ. ಇದರ ಜೊತೆಗೆ ನಾಳೆ ಸಂಚರಿಸುವ ರೈಲು ಸಂಖ್ಯೆ ೧೭೨೩೫ ಎಸ್‌ಎಂವಿಟಿ ಬೆಂಗಳೂರು-ನಾಗರ್‌ಕೋಯಿಲ್ ಎಕ್ಸ್‌ಪ್ರೆಸ್ ಅನ್ನು ರದ್ದುಗೊಳಿಸಲಾಗಿದೆ.

<><><><>

ಸೀಷೆಲ್ಸ್‌ನ ಅಧ್ಯಕ್ಷರಾಗಿ ಹೊಸದಾಗಿ ಆಯ್ಕೆಯಾದ ಡಾ.ಪ್ಯಾಟ್ರಿಕ್ ಹರ್ಮೈನಿ ಅವರ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಪಾಲ್ಗೊಂಡು ಸೀಷೆಲ್ಸ್ ಪ್ರವಾಸ ಕೈಗೊಂಡಿದ್ದ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಇಂದು ಬೆಳಗ್ಗೆ ಪ್ರವಾಸ ಸಂಪನ್ನಗೊಳಿಸಿ ಕೊಯಮತ್ತೂರಿಗೆ ಮರಳಿದ್ದಾರೆ. ಭೇಟಿಯ ವೇಳೆ ಉಪರಾಷ್ಟ್ರಪತಿ, ಅಧ್ಯಕ್ಷ ಡಾ.ಪ್ಯಾಟ್ರಿಕ್ ಮತ್ತು ಉಪಾಧ್ಯಕ್ಷ ಸೆಬೆಸ್ಟೀನ್ ಪಿಳ್ಳೈ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಮಹಾಸಾಗರದ ಉಪಕ್ರಮದ ದೃಷ್ಟಿಯಲ್ಲಿ ಸೀಶೆಲ್ಸ್‌ನೊಂದಿಗಿನ ಸಂಬಂಧಕ್ಕೆ ಭಾರತ ಹೆಚ್ಚಿನ ಮಹತ್ವ ನೀಡಿದೆ. ಜಾಗತಿಕ ದಕ್ಷಿಣದ ಕುರಿತು ಬದ್ಧತೆಯನ್ನು ಪುನರುಚ್ಚರಿಸಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ. ಪ್ರವಾಸದ ವೇಳೆ ಉಪರಾಷ್ಟ್ರಪತಿ ಮಾರೀಷಸ್ ಪ್ರಧಾನಿ ಡಾ.ನವೀನ್ ಚಂದ್ರ ರಾಮಗೂಲಂ ಅವರನ್ನು ಭೇಟಿಯಾಗಿ ಹಾಗೂ ಸಮುದಾಯ ಕಾರ್ಯಕ್ರಮವೊಂದರಲ್ಲಿ ಅನಿವಾಸಿ ಭಾರತೀಯ ಸಮುದಾಯವನ್ನುದ್ದೇಶಿಸಿ ಮಾತನಾಡಿದರು.

<><><><>

ಕಳೆದ ತಿಂಗಳಲ್ಲಿ ಭಾರತದ ಸ್ಮಾರ್ಟ್ ಫೋನ್ ರಫ್ತುಗಳು ದಾಖಲೆಯ ೧.೮ ಶತಕೋಟಿ ಅಮೆರಿಕ ಡಾಲರ್‌ಗೆ ತಲುಪಿದೆ ಎಂದು ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಪತ್ರಿಕೆಯೊಂದರ ಲೇಖನವನ್ನು ಹಂಚಿಕೊಂಡಿರುವ ಸಚಿವರು, ವಿದ್ಯುನ್ಮಾನ ಉತ್ಪನ್ನಗಳು ಈಗ ದೇಶದಿಂದ ರಫ್ತಾಗುವ ಎಲ್ಲಾ ಸರಕುಗಳಲ್ಲಿ ಮೂರನೇ ಅತಿದೊಡ್ಡ ವಿಭಾಗವಾಗಿದೆ. ದೇಶದಲ್ಲಿ ವಿದ್ಯುನ್ಮಾನ ಘಟಕಗಳ ಉತ್ಪಾದನೆ ಬೇರೂರುತ್ತಿರುವಂತೆ ಈ ವಲಯ ಸಾವಿರಾರು ಉದ್ಯೋಗಗಳನ್ನು ಸೃಜಿಸುವ ನಿರೀಕ್ಷೆ ಇದೆ ಎಂದು ವಿಶ್ವಾಸ ಸಚಿವರು ವ್ಯಕ್ತಪಡಿಸಿದ್ದಾರೆ.

<><><><>

ಪ್ರಧಾನಿ ನರೇಂದ್ರ ಮೋದಿ ಮುಂಬೈನಲ್ಲಿ ನಾಳೆ ನಡೆಯುವ ಕಡಲ ನಾಯಕರ ಸಮಾವೇಶವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಈ ಸಂದರ್ಭದಲ್ಲಿ, ಅವರು ಭಾರತ ಕಡಲ ಸಪ್ತಾಹ ೨೦೨೫ರ ಭಾಗವಾಗಿ ಜಾಗತಿಕ ಕಡಲ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳ ವೇದಿಕೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಈ ಕಾರ್ಯಕ್ರಮವು ಹಡಗು ಸಾಗಣೆ, ಬಂದರುಗಳು, ಹಡಗು ನಿರ್ಮಾಣ, ಹಡಗು ಪ್ರವಾಸೋದ್ಯಮ ಮತ್ತು ಕಡಲ ಆರ್ಥಿಕ ಹಣಕಾಸು ಕ್ಷೇತ್ರದಲ್ಲಿ ಪ್ರಮುಖ ಪಾಲುದಾರರನ್ನು ಒಟ್ಟುಗೂಡಿಸುವ ಪ್ರಮುಖ ಜಾಗತಿಕ ವೇದಿಕೆಯಾಗಿದೆ. ಈ ಕಾರ್ಯಕ್ರಮದಲ್ಲಿ ೮೫ ಕ್ಕೂ ಹೆಚ್ಚು ರಾಷ್ಟ್ರಗಳ ಒಂದು ಲಕ್ಷಕ್ಕೂ ಹೆಚ್ಚು ಪ್ರತಿನಿಧಿಗಳು ಮತ್ತು ೩೫೦ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಭಾ?ಣಕಾರರು ಭಾಗವಹಿಸಲಿದ್ದಾರೆ.

<><><><>

ಇದೇ ಶುಕ್ರವಾರದಂದು ನಡೆಯಲಿರುವ ರಾಷ್ಟ್ರೀಯ ಏಕತಾ ದಿನದ ಪರೇಡ್‌ನಲ್ಲಿ, ಗಡಿ ಭದ್ರತಾ ಪಡೆ - ಬಿಎಸ್‌ಎಫ್ ತುಕಡಿಯು, ಶಿಸ್ತು, ಚುರುಕುತನಕ್ಕೆ ಹೆಸರಾಗಿರುವ ಸ್ಥಳೀಯ ಶ್ವಾನದಳವನ್ನು ಪ್ರದರ್ಶಿಸಲಿದೆ. ಏಕತಾ ದಿವಸ್ ಪರೇಡ್ ಭಾರತದ ಸ್ವಾವಲಂಬಿ ಮತ್ತು ಹೆಮ್ಮೆಯ ಪ್ರತೀಕವಾದ ಕೇ ಪಡೆಯ ಸಂಕೇತವಾದ ಯುದ್ಧತಂತ್ರದ ಕೌಶಲ್ಯ ಮತ್ತು ಕಾರ್ಯಾಚರಣೆಯ ಶ್ರೇ?ತೆಯನ್ನು ಪ್ರದರ್ಶಿಸುವ ಶ್ವಾನ ತರಬೇತಿ ಪ್ರದರ್ಶನವನ್ನು ಸಹ ಒಳಗೊಂಡಿರುತ್ತದೆ. ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ಭಾನುವಾರ ಆಕಾಶವಾಣಿಯಲ್ಲಿ ಮನ್ ಕಿ ಬಾತ್ ಕಾರ್ಯಕ್ರಮದ ೧೨೭ ನೇ ಸಂಚಿಕೆಯಲ್ಲಿ ಬಿಎಸ್‌ಎಫ್ ಮತ್ತು ಸಿಆರ್‌ಪಿಎಫ್‌ನಲ್ಲಿ ಸ್ಥಳೀಯ ಶ್ವಾನಗಳ ಹೆಚ್ಚಿದ ಸೇರ್ಪಡೆಯನ್ನು ಶ್ಲಾಘಿಸಿದ್ದರು. ಪ್ರಧಾನಿಯವರ ಮನ್ ಕಿ ಬಾತ್ ಕಾರ್ಯಕ್ರಮದಿಂದ ಸ್ಫೂರ್ತಿ ಪಡೆದು ಬಿಎಸ್‌ಎಫ್ ಅಕಾಡೆಮಿ ಸಂತಾನೋತ್ಪತ್ತಿ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಪ್ರಾರಂಭಿಸಿದೆ ಮತ್ತು ಇಲ್ಲಿಯವರೆಗೆ ೧೫೦ ಭಾರತೀಯ ತಳಿಯ ನಾಯಿಗಳನ್ನು ಗಡಿಗಳಲ್ಲಿ ನಿಯೋಜಿಸಲಾಗಿದೆ ಎಂದು ತೇಕನ್ಪುರದ ಬಿಎಸ್‌ಎಫ್ ಅಕಾಡೆಮಿ ನಿರ್ದೇಶಕ ಡಾ. ಶಂಶೇರ್ ಸಿಂಗ್, ಹೇಳಿದ್ದಾರೆ.

<><><><>

ಈಜು ವಿಭಾಗದಲ್ಲಿ, ಭಾರತ ತಂಡವನ್ನು ಪ್ರತಿನಿಧಿಸುತ್ತಿರುವ ಬೆಂಗಳೂರಿನ ಧಿನಿಧಿ ದೇಸಿಂಗು ಬಹ್ರೇನ್ ನಲ್ಲಿ ನಡೆದ ಏಷ್ಯನ್ ಯೂತ್ ಗೇಮ್ಸ್ ೨೦೨೫ ರಲ್ಲಿ ೪೦೦ ಮೀಟರ್ ಫ್ರೀಸ್ಟೈಲ್ ನಲ್ಲಿ ಹೊಸ ರಾಷ್ಟ್ರೀಯ ದಾಖಲೆ ನಿರ್ಮಿಸಿದ್ದಾರೆ. ಧಿನಿಧಿ ೪ ನಿಮಿಷ ೨೧.೮೭ ಸೆಕೆಂಡುಗಳಲ್ಲಿ ಗುರಿ ತಲುಪಿ ಫೈನಲ್ ನಲ್ಲಿ ಐದನೇ ಸ್ಥಾನ ಪಡೆದರು. ೪ ನಿಮಿಷ ೨೪.೬೦ ಸೆಕೆಂಡುಗಳಲ್ಲಿ ಗುರಿ ತಲುಪುವ ಮೂಲಕ ತಮ್ಮದೇ ಆದ ದಾಖಲೆಯನ್ನು ಉತ್ತಮಗೊಳಿಸಿದ್ದಾರೆ.

<><><><>

ಪಕ್ಕೆಲುಬಿನ ಗಾಯದಿಂದ ಗಂಭೀರ ಆರೋಗ್ಯ ಸಮಸ್ಯೆಗೆ ತುತ್ತಾಗಿ ಸಿಡ್ನಿ ಆಸ್ಪತ್ರೆಯ ತೀವ್ರ ನಿಗಾಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಭಾರತ ತಂಡದ ಕ್ರಿಕೆಟ್ ಆಟಗಾರ ಶ್ರೇಯಸ್ ಅಯ್ಯರ್ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎಂದು ಟಿ-೨೦ ಕ್ರಿಕೆಟ್ ತಂಡದ ನಾಯಕ ಸೂರ್ಯಕುಮಾರ್ ಯಾದವ್ ತಿಳಿಸಿದ್ದಾರೆ. ಅಯ್ಯರ್ ಅವರನ್ನು ಐಸಿಯುನಿಂದ ಸ್ಥಳಾಂತರಿಸಲಾಗಿದೆ ಎಂದು ಐಎಎನ್‌ಎಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ. ಬಿಸಿಸಿಐ ಆಡಳಿತ ಮಂಡಳಿ ಅವರೊಂದಿಗೆ ನಿಕಟ ಸಂಪರ್ಕದಲ್ಲಿದೆ. ಚೇತರಿಕೆಯ ಬಗ್ಗೆ ನಿರಂತರವಾಗಿ ನಿಗಾ ಇಟ್ಟಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>